MARCH 20, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಪ್ರಧಾನಮಂತ್ರಿ ಸೂರ್ಯ ಘರ್ ಮತ್ತು ಪಿ.ಎಂ. ಕುಸುಮ್** ಯೋಜನೆ; 23 ಲಕ್ಷ ನೀರಾವರಿ ಪಂಪ್‌ಸೆಟ್‌ಗಳು, ಸೌರಶಕ್ತಿ ಚಾಲಿತ.

**ಸ್ವಚ್ಛ ಭಾರತ ಅಭಿಯಾನ;** ಚಿಕ್ಕಬಳ್ಳಾಪುರ ಜಿಲ್ಲೆಯ, ಕಲ್ಯಾಣಿ, ಪು ್ಕರಣಿಗಳ ಸ್ವಚ್ಛತೆಗಾಗಿ ತ್ರೈಮಾಸಿಕ, ಶ್ರಮದಾನ.

**ಇಂದು ಕರಾವಳಿ ಭಾಗದಲ್ಲಿ,** ಈದ್ ಉಲ್ ಫಿತ್ರ್; ಚಂದ್ರ ದರ್ಶನದ ಬಳಿಕ, ಉಳಿದೆಡೆ, ನಾಳೆ, ಮುಸ್ಲಿಂ ಬಾಂಧವರಿಂದ, ರಂಜಾನ್ ಹಬ್ಬದಾಚರಣೆ.

**ಇಂದು, ವಿಶ್ವ ಮನೆ ಅಂಗಳದ** ಗುಬ್ಬಚ್ಚಿಗಳ ದಿನಾಚರಣೆ.

<><><>

**ಆತ್ಮ ನಿರ್ಭರ ಭಾರತ ಪ್ರಕಲ್ಪದ ಭಾಗವಾಗಿ,** ಪ್ರಧಾನಮಂತ್ರಿ ಸೂರ್ಯ ಘರ್ ಮತ್ತು ಪಿ.ಎಂ. ಕುಸುಮ್ ಯೋಜನೆಗಳ ಅಡಿ, 23 ಲಕ್ಷ ನೀರಾವರಿ ಪಂಪ್ ಸೆಟ್‌ಗಳು, ಸೌರಶಕ್ತಿ ಚಾಲಿತವಾಗಿ, ಪರಿವರ್ತನೆಗೊಂಡಿವೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ. ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ, ಜಾಗತಿಕವಾಗಿ ಭಾರತ, ಮೂರನೇ ಅತಿ ದೊಡ್ಡ ರಾಷ್ಟ್ರವಾಗಿ, ಹೊರಹೊಮ್ಮಿದೆ. 2030ರ ವೇಳೆಗೆ, 500 ಗಿಗಾ ವ್ಯಾಟ್‌ನಷ್ಟು, ನವೀಕರಿಸಬಹುದಾದ ಇಂಧನ ಉತ್ಪಾದನೆ ಗುರಿ ಸಾಧಿಸುವತ್ತ, ಭಾರತ, ಹೆಜ್ಜೆ ಇರಿಸಿದೆ. ರಸಗೊಬ್ಬರ ಉದ್ಯಮದ, ಶೇಕಡ 28 ರ ್ಟು ಅಮೋನಿಯಾವನ್ನು, ಹಸಿರು ಅಮೋನಿಯಾದೊಂದಿಗೆ ಬದಲಾಯಿಸಲು, ಸಿದ್ಧತೆ ನಡೆದಿದೆ ಎಂದಿದ್ದಾರೆ.

<><><>

**ಈ ತಿಂಗಳ 23 ರಿಂದ, ಜೂನ್ ಅಂತ್ಯದ ವರೆಗೆ,** ಚಿಕ್ಕಬಳ್ಳಾಪುರ ಜಿಲ್ಲೆಯ, ಎಲ್ಲ ಗ್ರಾಮ ಪಂಚಾಯ್ತಿಗಳ, ಕಲ್ಯಾಣಿ, ಪು ್ಕರಣಿ ಮತ್ತು ಹೊಂಡಗಳಲ್ಲಿ, ಸಾರ್ವಜನಿಕ ಸಹಭಾಗಿತ್ವದ, ಶ್ರಮದಾನದ ಮೂಲಕ, ಹೂಳೆತ್ತಿ, ಸ್ವಚ್ಛಗೊಳಿಸಲಾಗುತ್ತಿದೆ. ಜಿಲ್ಲಾ ಪಂಚಾಯಿತಿ, ಸಿ.ಇ.ಓ. ನವೀನ ಭಟ್ ಮಾಹಿತಿ ನೀಡಿ, ಅಂತರ್ಜಲ ವೃದ್ಧಿಸಲು, ಮೂರು ತಿಂಗಳ ವಿಶೇ ್ ಅಭಿಯಾನದ ಮೂಲಕ, ಒಟ್ಟು 180 ಕಲ್ಯಾಣಿಗಳ ಸ್ವಚ್ಛತಾ ಕಾರ್ಯ, ಸ್ವಚ್ಛ ಭಾರತ ಆಂದೋಲನ ಹಾಗೂ ಸ್ವಚ್ಛತೆಯೇ ಸೇವೆ ಅಭಿಯಾನದಡಿ, ಕೈಗೊಳ್ಳಲಾಗುತ್ತಿದೆ. ರಾಷ್ಟ್ರೀಯ ಸೇವಾ ಯೋಜನೆ ಸ್ವಯಂಸೇವಕರು, ಎನ್.ಸಿ.ಸಿ. ಕೆಡೆಟ್‌ಗಳು ಸೇರಿದಂತೆ, ವಿವಿಧ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು, ಸ್ಥಳೀಯ ಸಮುದಾಯ ಹಾಗೂ ಸ್ವಚ್ಛತಾ ಸೇನಾನಿಗಳೊಂದಿಗೆ, ಕೈ ಜೋಡಿಸಲಿದ್ದಾರೆ, ಎಂದರು.

<><><>

**ಬಿರು ಬೇಸಿಗೆ ಹಿನ್ನೆಲೆ,** ವನ್ಯಜೀವಿಗಳಿಗೆ ನೀರಿನ ಕೊರತೆ ಉಂಟಾಗದಂತೆ, ತಾತ್ಕಾಲಿಕ ಜಲಗುಂಡಿಗಳನ್ನು ರೂಪಿಸಿ, ನೀರಿನ ಲಭ್ಯತೆ ಮತ್ತು ಸತತ ನಿರ್ವಹಣೆ ಖಾತ್ರಿ ಪಡಿಸುವಂತೆ, ಅರಣ್ಯ ಖಾತೆ ಸಚಿವ, ಈಶ್ವರ ಖಂಡ್ರೆ, ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಈ ಮಾಹಿತಿ ನೀಡಿ, ಸಮುದಾಯದ ಸಹಭಾಗಿತ್ವದಲ್ಲಿ, ವನ್ಯಜೀವಿಗಳ ಸಂರಕ್ಷಣೆಗೆ ಬಲ ತುಂಬುವುದು, ತಮ್ಮ ಸಂಕಲ್ಪ ಎಂದಿದ್ದಾರೆ.

<><><>

**ಬಾಗಲಕೋಟೆ ವಿಧಾನಸಭಾ ಕ್ಷೇತ್ರದಿಂದ,** ಬಿಜೆಪಿ ಅಭ್ಯರ್ಥಿಯಾಗಿ, ವೀರಭದ್ರಯ್ಯ ಚರಂತಿಮಠ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ, ಟಿ. ಶ್ರೀನಿವಾಸ ದಾಸಕರಿಯಪ್ಪ ಸ್ಪರ್ಧಿಸಲಿದ್ದಾರೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ, ನಿತಿನ ನವೀನ ಅಧ್ಯಕ್ಷತೆಯಲ್ಲಿ ಜರುಗಿದ, ಪಕ್ಷದ ಕೇಂದ್ರ ಚುನಾವಣಾ ಸಮಿತಿ ಸಭೆ, ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದೆ.

<><><>

**ಬಾಗಲಕೋಟೆ ವಿಧಾನಸಭಾ ಕ್ಷೇತ್ರದ** ಉಪ ಚುನಾವಣೆ ಹಿನ್ನೆಲೆ, ಚುನಾವಣೆಯ ವೀಕ್ಷಕ ಪಾರುಲ್ ಪಟವಾರಿ, ಭದ್ರತಾ ಕೊಠಡಿ ಹಾಗೂ ಮತ ಎಣಿಕೆ ಕೇಂದ್ರವನ್ನು ಪರಿಶೀಲಿಸಿದರು. ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ, ಚುನಾವಣೆಗೆ ಸಂಬಂಧಿಸಿ, ಕೈಗೊಳ್ಳಲಾದ ಅಗತ್ಯ ಸಿದ್ಧತೆಗಳ ಕುರಿತು ಮಾಹಿತಿ ನೀಡಿದರು. ನವನಗರದ ಪ್ರಥಮ ದರ್ಜೆ ಕಾಲೇಜಿನ ಮಸ್ಟರಿಂಗ್ ಮತ್ತು ಡಿಮಸ್ಟರಿಂಗ್ ಕೇಂದ್ರಕ್ಕೆ, ಅವರು ಭೇಟಿ ನೀಡಿದರು.

<><><>

**ಬಾಗಲಕೋಟೆ ಜಿಲ್ಲೆ, ನಾಯನೇಗಲಿ** ತನಿಖಾ ಠಾಣೆಯಲ್ಲಿ, ತಪಾಸಣೆ ವೇಳೆ, ದಾಖಲೆಗಳಿಲ್ಲದೆ ಸಾಗಿಸುತ್ತಿದ್ದ, 15 ಲಕ್ಷದ 50 ಸಾವಿರ ರೂಪಾಯಿ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಬಬಲೇಶ್ವರದಿಂದ ಕು ್ಟಗಿ ಕಡೆಗೆ ತೆರಳುತ್ತಿದ್ದ, ಕಾರನ್ನು ತಡೆದು ಪರಿಶೀಲಿಸಿದ ಸಂದರ್ಭದಲ್ಲಿ, ಉಪ ಚುನಾವಣೆ ನೀತಿ ಸಂಹಿತೆ ಉಲ್ಲಂಘನೆ ಹಿನ್ನೆಲೆ, ವಶ ಪಡಿಸಿಕೊಳ್ಳಲಾಗಿದೆ ಎಂದು, ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

<><><>

**ಇಂದು, ಕರಾವಳಿ ಕರ್ನಾಟಕದ,** ದಕ್ಷಿಣಕನ್ನಡ, ಉಡುಪಿ, ಭಟ್ಕಳದಲ್ಲಿ, ಮುಸ್ಲಿಂ ಬಾಂಧವರು, ಈದ ಉಲ್ ಫಿತ್ರ, ರಂಜಾನ್ ಹಬ್ಬವನ್ನು, ಸಾಮೂಹಿಕ ಪ್ರಾರ್ಥನೆ ಹಾಗೂ ಪರಸ್ಪರ ಶುಭಾಶಯ ಕೋರುವ ಮೂಲಕ, ಶ್ರದ್ಧಾಭಕ್ತಿಯಿಂದ ಆಚರಿಸಲಿದ್ದಾರೆ. ರಾಜ್ಯದ ಉಳಿದ ಭಾಗಗಳಲ್ಲಿ, ಚಂದ್ರ ದರ್ಶನದ ಬಳಿಕ, ನಾಳೆ ಹಬ್ಬವನ್ನು ಆಚರಿಸಲಾಗುವುದು ಎಂದು, ರಾಜ್ಯ ಚಂದ್ರ ದರ್ಶನ ಸಮಿತಿ, ಪ್ರಕಟಿಸಿದೆ. ರಂಜಾನ್ ಹಬ್ಬದ ಹಿನ್ನೆಲೆ, ಪ್ರಾರ್ಥನಾ ಮಂದಿರಗಳ ದೀಪಾಲಂಕಾರ, ಈದ್ಗಾ ಮೈದಾನಗಳ ನೈರ್ಮಲ್ಯೀಕರಣ, ಖರೀದಿ ಸೇರಿದಂತೆ, ಪೂರ್ವಭಾವಿ ಸಿದ್ಧತೆಗಳು, ಭರದಿಂದ ಸಾಗಿವೆ.

<><><>

**ಇಂದು ಬಾಯಿಯ ಆರೋಗ್ಯ ಹಾಗೂ** ನೈರ್ಮಲ್ಯ ಕಾಪಾಡುವ, ಅಗತ್ಯದ ಕುರಿತು, ಜನ ಜಾಗೃತಿ ಮೂಡಿಸುವ, ವಿಶ್ವ ಮೌಖಿಕ ಆರೋಗ್ಯ ದಿನ. 'ಸಂತಸದ ಮುಖ, ಸಂತೋಷದ ಜೀವನ' ಎಂಬ ಧ್ಯೇಯದೊಂದಿಗೆ, ಶ್ರೀ ಸಾಮಾನ್ಯರು ತಮ್ಮ ಬಾಯಿ ಆರೋಗ್ಯವನ್ನು ಖಚಿತಪಡಿಸಿಕೊಳ್ಳಲು, ಸಕಾಲಿಕ ಪರೀಕ್ಷೆ, ತಜ್ಞರ ಮಾರ್ಗದರ್ಶನ ಹಾಗೂ, ಚಿಕಿತ್ಸೆ-ಆರೈಕೆ ಪಡೆಯುವಂತೆ, ಅರಿವು ಮೂಡಿಸುವ ದಿನ.

<><><>

**14 ವರ್ಷದ ಒಳಗಿನ,** ಬಾಲಕಿಯರಲ್ಲಿ, ಗರ್ಭಕಂಠದ ಕ್ಯಾನ್ಸರ ತಡೆಯಲು, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಸಹಯೋಗದಲ್ಲಿ, ರಾಜ್ಯಾದ್ಯಂತ ಮುಂಬರುವ ಮೂರು ತಿಂಗಳುಗಳ ಕಾಲ, ರಾಜ್ಯ ಆರೋಗ್ಯ ಇಲಾಖೆ ಆಯೋಜಿಸಿದ, ಎಚ್.ಪಿ.ವಿ. ಉಚಿತ ಲಸಿಕೆ ನೀಡಿಕೆ ಅಭಿಯಾನಕ್ಕೆ, ಬಾಗಲಕೋಟೆ ಜಿಲ್ಲೆ, ಬಾದಾಮಿ ತಾಲೂಕು ಆಸ್ಪತ್ರೆಯಲ್ಲಿ, ತಾಲೂಕು ಆರೋಗ್ಯಾಧಿಕಾರಿ, ಡಾಕ್ಟರ್ ಎಂ.ಬಿ. ಪಾಟೀಲ, ಚಾಲನೆ ನೀಡಿದರು. ಹೊಂಡದ, ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಹಾಗೂ ಶ್ರೀ ಬಸವೇಶ್ವರ ಪ್ರೌಢಶಾಲೆಯ, ಒಟ್ಟು 27 ಬಾಲಕಿಯರಿಗೆ, ಲಸಿಕೆ ನೀಡಲಾಯಿತು. ಬಾಲಕಿಯರಿಗೆ, ಮುಂಜಾಗ್ರತಾ ಕ್ರಮವಾಗಿ, ಪಾಲಕರು ಎಚ್.ಪಿ.ವಿ. ಲಸಿಕೆ ಹಾಕಿಸುವಂತೆ, ಅವರು ಮನವಿ ಮಾಡಿದರು.

<><><>

**'ಪಕ್ಷಿ ಸ್ನೇಹಿ ನಗರಗಳು ಹಾಗೂ** ಸಮುದಾಯಗಳನ್ನು ರೂಪಿಸುವುದು' ಎಂಬ ಧ್ಯೇಯದೊಂದಿಗೆ, ಇಂದು ವಿಶ್ವ ಗುಬ್ಬಚ್ಚಿ ದಿನಾಚರಣೆ. ಪರಿಸರ ವ್ಯವಸ್ಥೆಯ ಆರೋಗ್ಯ ಸೂಚಕ, ಮನೆ ಅಂಗಳದ ಗುಬ್ಬಚ್ಚಿಗಳ, ಸಂರಕ್ಷಣೆ ಕುರಿತು, ಜನ ಜಾಗೃತಿ ಮೂಡಿಸುವ ದಿನ. 2010 ರಿಂದ, ಪ್ರತಿ ವರ್ಷ ಮಾರ್ಚ್ 20 ರಂದು ಆಚರಿಸಲಾಗುವ, ಗುಬ್ಬಚ್ಚಿ ದಿನದ ವಿಶೇಷತೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡದ ನೇಚರ್ ರಿಸರ್ಚ್ ಸೆಂಟರ ಕಾರ್ಯಾಧ್ಯಕ್ಷ ಪಿ.ವಿ ಹಿರೇಮಠ.

<><><>

**ಕಳಸಾ-ಬಂಡೂರಿ** ನಾಲಾ ಜೋಡಣೆಗೆ, ಮಹದಾಯಿ ನದಿ ತಿರುವು ಯೋಜನೆ, ಆಲಮಟ್ಟಿ ಅಣೆಕಟ್ಟೆ ಎತ್ತರ ಹೆಚ್ಚಳ ಸೇರಿದಂತೆ, ರಾಜ್ಯದ ನೀರಾವರಿ ಯೋಜನೆಗಳಿಗೆ ಕೇಂದ್ರದಿಂದ ಅಗತ್ಯ ನೆರವು ಕೋರಿ, ಪ್ರಧಾನಮಂತ್ರಿ ಬಳಿಗೆ, ಸರ್ವ ಪಕ್ಷ ನಿಯೋಗದಲ್ಲಿ ತೆರಳಿ, ಮನವಿ ಮಾಡುವುದಾಗಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಆಲಮಟ್ಟಿ ಅಣೆಕಟ್ಟೆ ಎತ್ತರ ಹೆಚ್ಚಿಸುವ ಪ್ರಕ್ರಿಯೆ ಮುಂದುವರೆಸಲು, ಯಾವುದೇ ಅಡ್ಡಿ ಇಲ್ಲ ಎಂದು, ರಾಜ್ಯದ ಪರ ನ್ಯಾಯವಾದಿಗಳು, ಹೊಸ ದಿಲ್ಲಿಯಲ್ಲಿ ನಡೆದ, ರಾಜ್ಯವನ್ನು ಪ್ರತಿನಿಧಿಸುವ, ಸಂಸದರೊಂದಿಗಿನ ಸಮಾಲೋಚನಾ ಸಭೆಯಲ್ಲಿ, ಸ್ಪಷ್ಟ ಪಡಿಸಿದ್ದಾಗಿ ನುಡಿದರು.

<><><>

**ಬಾಗಲಕೋಟೆ ಜಿಲ್ಲೆ,** ಬಾದಾಮಿ ತಾಲೂಕು, ಯಂಡಿಗೇರಿ ಗ್ರಾಮದಲ್ಲಿ ಸುರಿದ, ಆಲಿಕಲ್ಲು ಮಳೆಗೆ, ಹುಸೇನಸಾಬ ಬಾಂಗದ ಅವರ, 25ಕ್ಕೂ ಹೆಚ್ಚು ಕುರಿ-ಆಡುಗಳು ಸಾವನ್ನಪ್ಪಿದ ಘಟನೆ ವರದಿಯಾಗಿದೆ. ಗದಗ ಜಿಲ್ಲೆಯಲ್ಲಿ ಸುರಿದ ಮಳೆಯಿಂದಾಗಿ, ಹೂವುಗಳ ಕೊಯ್ಲು ಕಾರ್ಯ ಸ್ಥಗಿತಗೊಂಡಿದೆ. ಮಾರುಕಟ್ಟೆಯಲ್ಲಿ ಹೂವುಗಳ ಕೊರತೆ, ಸಾಲು ಹಬ್ಬಗಳ ಹಿನ್ನೆಲೆ, ದರ ಏರಿಕೆಗೆ ಕಾರಣವಾಗಿದೆ. ಜಿಲ್ಲೆಯ ಲಕ್ಕುಂಡಿ, ಕದಂಪೂರ, ಪಾಪನಾಶಿ ಸೇರಿದಂತೆ, ಹಲವು ಗ್ರಾಮಗಳಲ್ಲಿ, ಹೂವುಗಳ ಕೃಷಿಕಾರರು, ಮಳೆಯಿಂದಾಗಿ ತೀವ್ರ ಹಾನಿಗೆ ಈಡಾಗಿದ್ದಾರೆ. ತಾಕುಗಳಲ್ಲಿ ತೇವಾಂಶ ಹೆಚ್ಚಿ, ಹೂವಿಗಳ ಗುಣಮಟ್ಟ ಕುಸಿದಿದೆ. ಗದಗ ಹೂವಿನ ಮಾರುಕಟ್ಟೆಯಿಂದ, ಗೋವಾ, ಮಹಾರಾಷ್ಟ್ರ ಸೇರಿದಂತೆ, ಹೊರ ರಾಜ್ಯಗಳಿಗೆ ಸಾಗಣೆ ಕಡಿಮೆಯಾಗಿದೆ. ಸರ್ಕಾರ, ಹೂವಿನ ಬೆಳೆ ಹಾನಿಗೆ ಸೂಕ್ತ ಪರಿಹಾರ ನೀಡಬೇಕೆಂದು, ತೋಟಿಗರು ಆಗ್ರಹಿಸಿದ್ದಾರೆ. ಗದಗ ತಾಲೂಕು ಬಿಂಕದಕಟ್ಟಿ ಗ್ರಾಮದಲ್ಲಿ, ಓರ್ವ ರೈತ ದಂಪತಿಗೆ ಸೇರಿದ, ಬಾಳೆ ಹಾಗೂ ಪಪ್ಪಾಯಿ ತೋಟ ಸಂಪೂರ್ಣ ನೆಲಕಚ್ಚಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಪ್ರಧಾನಮಂತ್ರಿ ಸೂರ್ಯ ಘರ್ ಮತ್ತು ಪಿ.ಎಂ. ಕುಸುಮ್** ಯೋಜನೆ; 23 ಲಕ್ಷ ನೀರಾವರಿ ಪಂಪ್‌ಸೆಟ್‌ಗಳು, ಸೌರಶಕ್ತಿ ಚಾಲಿತ.

**ಸ್ವಚ್ಛ ಭಾರತ ಅಭಿಯಾನ;** ಚಿಕ್ಕಬಳ್ಳಾಪುರ ಜಿಲ್ಲೆಯ, ಕಲ್ಯಾಣಿ, ಪು ್ಕರಣಿಗಳ ಸ್ವಚ್ಛತೆಗಾಗಿ ತ್ರೈಮಾಸಿಕ, ಶ್ರಮದಾನ.

**ಇಂದು ಕರಾವಳಿ ಭಾಗದಲ್ಲಿ,** ಈದ್ ಉಲ್ ಫಿತ್ರ್; ಚಂದ್ರ ದರ್ಶನದ ಬಳಿಕ, ಉಳಿದೆಡೆ, ನಾಳೆ, ಮುಸ್ಲಿಂ ಬಾಂಧವರಿಂದ, ರಂಜಾನ್ ಹಬ್ಬದಾಚರಣೆ.

**ಇಂದು, ವಿಶ್ವ ಮನೆ ಅಂಗಳದ** ಗುಬ್ಬಚ್ಚಿಗಳ ದಿನಾಚರಣೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>